ಅಭಿವೃದ್ಧಿ ಕಾಮಗಾರಿಗಳು

5073 (5708); ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)

ಅ) ಕಳೆದ ಮೂರು ವರ್ಷಗಳಿಂದ ಈವರೆಗೆ ರಾಯಚೂರು ಜಿಲ್ಲೆಯ ಸಿಂಧನೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಮ್ಮಿಕೊಳ್ಳಲಾಗಿರುವ ಅಭಿವೃದ್ಧಿ ಕಾಮಗಾರಿಗಳು ಯಾವುವು? (ಕಾಮಗಾರಿ ವಿವರಗಳನ್ನು ಅನುದಾನದ ಸಮೇತ ವಿವರ ನೀಡುವುದು)

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) 2012–13, 2013–14 ಮತ್ತು 2014–15ನೇ ಸಾಲಿನಲ್ಲಿ ಕಾಮಗಾರಿ ಅಭಿವೃದ್ಧಿಗಳನ್ನು ಹಮ್ಮಿಕೊಂಡಿರುವುದಿಲ್ಲ.

2013–14ನೇ ಸಾಲಿನಲ್ಲಿ ಸಿಂಧನೂರು ಮತ ಕ್ಷೇತ್ರಕ್ಕೆ ಸಂಬಂಧ ಪಟ್ಟಂತೆ ಬಹುರೂಪಿ ಚೌಡಯ್ಯ ಹಗಲುವೇಷಗಾರರ ಕಲಾವಿದರ ಸಂಘ(ರಿ) ಹಸಮಕಲ್ ಇವರಿಗೆ ರೂ. 5.00 ಲಕ್ಷಗಳನ್ನು ಸಾಂಸ್ಕೃತಿಕ ಮಂದಿರ ನಿರ್ಮಾಣಕ್ಕಾಗಿ ಮಂಜೂರು ಮಾಡಿದ್ದು, ಮಾನ್ಯ ಜಿಲ್ಲಾಧಿಕಾರಿಗಳು ರಾಯಚೂರು ಇವರು ಈ ಕೆಲಸವನ್ನು ಕೆ.ಆರ್.ಐ.ಡಿ.ಎಲ್ ರಾಯಚೂರು ಇವರಿಗೆ ವಹಿಸಲಾಗಿದೆ.

ಕಾಮಗಾರಿ ಪ್ರಾರಂಭವಾಗಿರುವುದಿಲ್ಲ.